
# ಜ್ಞಾನಶಕ್ತಿ
## ಮಾಸ ಪತ್ರಿಕೆ
# JNANASHAKTHI




## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ಆಗಸ್ಟ್ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 8 ಪ್ರಕಟಣೆ : 9-08-2022


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಶ್ರೀ ಕೆ. ಅನಂತ ಶರ್ಮ ಮತ್ತು ಮಕ್ಕಳು ತಮ್ಮ ತಾಯಿ ಶ್ರೀಮತಿ ಸರೋಜಿನಿ ಶರ್ಮಾರವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- ದೇಣಿಗೆ ನೀಡಿದ್ದಾರೆ. ಅವರು ಈ ಹಿಂದೆ ರೂ. 50,000/- ನೀಡಿದ್ದು, ಒಟ್ಟಿಗೆ ರೂ. 1,50,000/- ದೇಣಿಗೆ ನೀಡಿದಂತಾಗಿದೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಸಿಎ. ನಾಗರಾಜ್ ಶರ್ಮಾ, ಶ್ರೀಮತಿ ಆರತಿ ಶರ್ಮಾ, ಶ್ರೀ ಪ್ರತೀಕ್ ಶರ್ಮಾ, ಶ್ರೀ ಸಭಾದ ಉಪಾಧ್ಯಕ್ಷರಾದ ಡಾ| ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ರಘುವೀರ್ ಪೆರ್ಡೂರು ಉಪಸ್ಥಿತರಿದ್ದರು.




ಶ್ರೀ ಬಿ. ಭುಜಂಗ ರಾವ್, ಪ್ರಖ್ಯಾತ ದಕ್ಷಿಣಾದಿ ಸಂಗೀತ ವಿದ್ವಾಂಸರು, ಉಡುಪಿ ಮತ್ತು ಶ್ರೀಮತಿ ಶಾಂತಮ್ಮ ಇವರ ಸ್ಮರಣಾರ್ಥ ಅವರ ಮಗಳು ಶ್ರೀಮತಿ ರಾಜೇಶ್ವರಿ ಶುಭಾಕರ್ ಶಾನುಭೋಗ್, ಕಾಸರಗೋಡು ಮತ್ತು ಅವರ ಮಗ ಶ್ರೀ ಬಿ. ಜಯರಾಮ್ ರಾವ್, ಮೊಕ್ತೇಸರರು ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- ಶ್ರೀ ಸುಬ್ರಹ್ಮಣ್ಯ ಸಭಾದ 'ಆಟಿತೋ ಆಟ ಕೂಟ' ಕಾರ್ಯಕ್ರಮದಲ್ಲಿ ದೇಣಿಗೆ ನೀಡಿದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಶುಭಾಕರ್ ಶಾನುಭೋಗ್, ಶ್ರೀಮತಿ ವೀಣಾ ಜಯರಾಮ್ ರಾವ್, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ, ಉಪಾಧ್ಯಕ್ಷರುಗಳಾದ ಡಾ| ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಜತೆ ಕಾರ್ಯದರ್ಶಿಗಳಾದ ಶ್ರೀ ಅನಿಲ್ ರಾವ್ ಬಿ. ಎಸ್., ಶ್ರೀ ಚೇತನ್ ಶರ್ಮಾ, ನಿರ್ದೇಶಕರುಗಳಾದ ಶ್ರೀ ಇನ್ನ ಚಂದ್ರಶೇಖರ್ ರಾವ್, ಶ್ರೀ ಪಿ. ಮುರಳೀಧರ ರಾವ್, ಶ್ರೀ ಎಂ. ಸುರೇಶ್ ರಾವ್, ಶ್ರೀ ಐ. ಪಿ. ನಾಗರಾಜ್ ರಾವ್ ಉಪಸ್ಥಿತರಿದ್ದರು.



ಪಾವಂಜೆ ದೇವಸ್ಥಾನದಲ್ಲಿ ಹಲವಾರು ವರ್ಷ ಅರ್ಚಕರಾಗಿ ಸೇವೆ ಸಲ್ಲಿಸಿ ಇದೀಗ ಪುರೋಹಿತ ವೃತ್ತಿಯಲ್ಲಿರುವ ಮುಂಡ್ಕೂರು ಶ್ರೀ ಸುಬ್ರಹ್ಮಣ್ಯ ಭಟ್ ತಮ್ಮ ಉಗ್ರರಥ ಶಾಂತಿ ಕಾರ್ಯಕ್ರಮದಲ್ಲಿ ಮಾತಾಪಿತರಾದ ಮುಂಡ್ಕೂರು ಕಂಗುಳ ವಿಶ್ವನಾಥ್ ರಾವ್ ಮತ್ತು ಶ್ರೀಮತಿ ಗಿರಿಜಮ್ಮ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 50,000/- ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಅವರ ಪತ್ನಿ ಶ್ರೀಮತಿ ನಾಗರತ್ನ, ಮಗಳು ಶ್ರೀಮತಿ ಶರ್ವಾಣಿ, ಅಳಿಯ ತುದಿಯಡ್ಕ ಶ್ರೀ ಸುಬ್ರಹ್ಮಣ್ಯ, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ, ಉಪಾಧ್ಯಕ್ಷರಾದ ಡಾ| ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ಮುರಳೀಧರ ರಾವ್, ಶ್ರೀ ರಘುವೀರ್ ಪೆರ್ಡೂರು, ಶ್ರೀ ಮನೀಶ್ ರಾವ್, ಸಿಎ. ನಾಗರಾಜ್ ಶರ್ಮಾ ಉಪಸ್ಥಿತರಿದ್ದರು.

ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರು



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ತಾರೀಕು 08-09-2022ನೇ ಗುರುವಾರ ಬೆಳಗ್ಗೆ 6-00 ಗಂಟೆಗೆ
ಶ್ರೀ ಸಭಾದಲ್ಲಿ **ಋಗುಪಾಕರ್ಮ** ನಡೆಯಲಿದೆ.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

## ಶೃಂಗೇರಿ ಯಾತ್ರೆ



ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಗಳ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಶೃಂಗೇರಿ ಯಾತ್ರೆಯನ್ನು ಆಯೋಜಿಸಲಾಗಿದೆ. ತಾ. 28-08-2022ರ ರವಿವಾರ ಬೆಳಗ್ಗೆ ಗಂಟೆ 6-30ಕ್ಕೆ ಶ್ರೀ ಸಭಾದಿಂದ ಬಸ್ಸಿನಲ್ಲಿ ಹೊರಟು, ಸಂಜೆಯ ವೇಳೆಗೆ ಹಿಂತಿರುಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ. ವ್ಯವಸ್ಥೆಯ ದೃಷ್ಟಿಯಿಂದ ಸಾಕಷ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಲು ಕೋರಲಾಗಿದೆ.

**ಪ್ರವಾಸದ ಶುಲ್ಕ :**
ಒಬ್ಬರಿಗೆ - ರೂ. 500/-
5ರಿಂದ 12 ವರ್ಷದೊಳಗಿನ ಮಕ್ಕಳಿಗೆ - ರೂ. 300/-

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**
ಶ್ರೀ ಅನಿಲ್ ಎನ್. ✆ : 9448815172
ಶ್ರೀಮತಿ ಕುಸುಮಾ ನವೀನ್ ಕುಮಾರ್ ✆ : 9480760904

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು





ಸಮಾಜ ಬಾಂಧವರೇ,
ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ ಈ ಬಾರಿ
ತಾರೀಕು 14-08-2022ನೇ ರವಿವಾರದಂದು
**ಶ್ರೀಕೃಷ್ಣ ಜನ್ಮಾಷ್ಟಮಿಯನ್ನು**
ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತಿದ್ದೇವೆ.
ಅಧ್ಯಕ್ಷರು ಮತ್ತು ಸರ್ವ ಸದಸ್ಯರು

### ಕಾರ್ಯಕ್ರಮಗಳು

ಬೆಳಗ್ಗೆ 7-30ರಿಂದ 8-30 :
ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ಗುರು ಸಪರ್ಯಾ
ಬೆಳಗ್ಗೆ 8-30ರಿಂದ : ಉಪಾಹಾರ
10-00ರಿಂದ : ಭಗವದ್ಗೀತೆ ಪಠನ ಸ್ಪರ್ಧೆ
10 ವರ್ಷದ ಕೆಳಗಿನ ಮಕ್ಕಳಿಗೆ
ಭಗವದ್ಗೀತೆಯ ಧ್ಯಾನಶ್ಲೋಕ ಸ್ಪರ್ಧೆ
10-18 ವರ್ಷದ ವಿಭಾಗ
12ನೇ ಅಧ್ಯಾಯದ ಆರಂಭದ 10 ಶ್ಲೋಕಗಳು
18 ವರ್ಷ ಮೇಲ್ಪಟ್ಟು
12ನೇ ಅಧ್ಯಾಯದ ಆರಂಭದ 10 ಶ್ಲೋಕಗಳು
11-00ರಿಂದ : ಮುದ್ದುಕೃಷ್ಣ ವೇಷ ಸ್ಪರ್ಧೆ
3 ವರ್ಷದೊಳಗಿನ ವಿಭಾಗ
3ರಿಂದ 8 ವರ್ಷದೊಳಗಿನ ವಿಭಾಗ
8ರಿಂದ 12 ವರ್ಷದೊಳಗಿನ ವಿಭಾಗ

11-30ರಿಂದ : ಭಕ್ತಿಗೀತೆ ಸ್ಪರ್ಧೆ
12ರಿಂದ 30 ವರ್ಷದ ಒಳಗಿನ ವಿಭಾಗ
30 ವರ್ಷ ಮೇಲ್ಪಟ್ಟವರ ವಿಭಾಗ
ಮಡಕೆ ಒಡೆಯುವ ಸ್ಪರ್ಧೆ
ಚಕ್ಕುಲಿ ಸಂಖ್ಯೆ ಊಹನೆ ಸ್ಪರ್ಧೆ (ಮುಕ್ತ ವಿಭಾಗ)
ಮಧ್ಯಾಹ್ನ 1-00ರಿಂದ : ಭೋಜನ
ಮಧ್ಯಾಹ್ನ 2-00ರಿಂದ :
ಶಂಖ ಊದುವ ಸ್ಪರ್ಧೆ (ಮುಕ್ತ ವಿಭಾಗ)
2-30ರಿಂದ : ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆ
3-00ರಿಂದ : ಸಾಂಸ್ಕೃತಿಕ ಕಾರ್ಯಕ್ರಮಗಳು

**ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಸಂಪರ್ಕಿಸಿ :**

| | |
|---|---|
| ಶ್ರೀಮತಿ ಕುಸುಮಾ ನವೀನ್‌ಕುಮಾರ್ | - 9480760904 |
| ಶ್ರೀಮತಿ ಪುಷ್ಪಾ ಶ್ರೀನಿವಾಸ್ | - 9739155359 |
| ಶ್ರೀ ಅನಿಲ್ ನೆಲ್ಲಿಕುಂಜೆ | - 9448815172 |
| ಶ್ರೀ ಸುರೇಶ್ ಕಡಬ | - 9972760673 |

- ಹೆಚ್ಚು ಹೆಚ್ಚು ಅಧ್ಯಯನ ಮಾಡಿದಂತೆಲ್ಲಾ, ನಮ್ಮ ಅಜ್ಞಾನದ ಅರಿವಾಗುತ್ತದೆ.
- ನಿಮ್ಮ ದೇಶವು ನಿಮಗಾಗಿ ಏನು ಮಾಡಬಹುದು ಎಂದು ಕೇಳಬೇಡಿ. ನಿಮ್ಮ ದೇಶಕ್ಕಾಗಿ ನೀವು ಏನು ಮಾಡಬಹುದು ಎಂದು ಯೋಚಿಸಿ. – ಜವಾಹರಲಾಲ್ ನೆಹರು

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್, ಪುತ್ತೂರು
ಮೊಬೈಲ್ : 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
● ನಾಗರಾಜ್ ವರ್ಕಾಡಿ ● ರಘುವೀರ್ ಪೆರ್ಡೂರು
● ಟಿ. ಬಿ. ಮೋಹನ್ ರಾವ್ ●ಸ್ವಾತಿ ಪ್ರಮೋದ್ ಕ್ಯಾದಿಗೆ


ಆರ್ಥಿಕ ಸಲಹಾ ಸಮಿತಿ :
● ಕರುಣ್ ರಾವ್ ಬೆಳ್ಳೆ ●ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
●ಚೇತನ್ ಶರ್ಮ
● ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

Whatsapp : 7795116598 ✆ : 9343361618
e-mail : jnanashakthisss@gmail.com


# 'ಲಯನ್ಸ್ ಪ್ರಶಸ್ತಿ ಪ್ರದಾನ' ಸಮಾರಂಭ







ತಾರೀಕು 3–07–2022ರಂದು ಬಂಟವಾಳದ 'ಬಾಜರ್ ಆಡಿಟೋರಿಯಂ'ನಲ್ಲಿ ಜರಗಿದ 'ಲಯನ್ಸ್ ಪ್ರಶಸ್ತಿ ಪ್ರದಾನ' ಸಮಾರಂಭದಲ್ಲಿ ದಕ್ಷಿಣ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನೊಳಗೊಂಡ, ಲಯನ್ಸ್ ಜಿಲ್ಲೆ 371-D ಅಂತಾರಾಷ್ಟ್ರೀಯ ಸೇವಾಸಂಸ್ಥೆ ಇದರಲ್ಲಿ ಹರ್ಷಕುಮಾರ್ ಕೇದಗೆ M.J.F. ಇವರಿಗೆ 'Best Region Mentor, District Support for Recognition of your Service' ಎಂಬ ಪ್ರಶಸ್ತಿ ಹಾಗೂ ಶ್ರೀಮತಿ ಕನಕವಲ್ಲಿ ಹೆಚ್. ಕೇದಗೆ ಇವರಿಗೆ 'Best District Chair Person - Ranga Vaibhava For Recognition of your Service' ಎಂಬ ಪ್ರಶಸ್ತಿಯನ್ನು ಜಿಲ್ಲಾ ಗವರ್ನರ್ Lion M.J.F. ವಸಂತ್ ಕುಮಾರ್ ದಂಪತಿಗಳು ಕಿಕ್ಕಿರಿದ ಜನರ ಕರತಾಡನದೊಂದಿಗೆ ನೀಡಿ ಗೌರವಿಸಿದರು. 37 ವರುಷಗಳಿಂದ ಲಯನ್ಸ್ ಸಂಸ್ಥೆ ಅಂತಾರಾಷ್ಟ್ರೀಯ ಸೇವಾ ಸಂಸ್ಥೆ ಇದರ ಸದಸ್ಯರಾಗಿ ಹಲವಾರು ಸೇವಾ ಕಾರ್ಯಗಳನ್ನು ಮಾಡಿ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.


'ಶಿವಸದನ'ವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಈಗಾಗಲೇ 34ಕ್ಕೂ ಹೆಚ್ಚು ನಿವಾಸಿಗಳಿದ್ದು ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. **ಆಸಕ್ತರಿಗೆ ಮಾಹಿತಿ ನೀಡಿ ಸಂಪರ್ಕಿಸಿರಿ :**

ಶ್ರೀ ಕರುಣ್ ರಾವ್ ಬೆಳ್ಳೆ
✆ : 7337634359

ಶ್ರೀ ಪಿ. ಶ್ರೀಕಾಂತ್ ರಾವ್
✆ : 7795116598



ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**



ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ

✆ : 9448043969
8861497325

**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**





ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216


## ಸ್ವಾತಂತ್ರ್ಯೋತ್ಸವದ ಅಮೃತೋತ್ಸವ



ಏರಲಿ, ಹಾರಲಿ, ಭಾರತದ ಸ್ವಾತಂತ್ರ್ಯೋತ್ಸವದ ಅಮೃತೋತ್ಸವ ಬಾವುಟ ।
ಭಾರತಾಂಬೆಯ ಮನೆ ಮನವನ್ನು ಬೆಳಗುವ ನಮ್ಮೀ ಬಾವುಟ ।
ಎಲ್ಲೆಲ್ಲೂ ಮೊಳಗಲಿ ಅಮೃತೋತ್ಸವ ಆಚರಣೆಯ ಸಂತಸ ಸಂಭ್ರಮ ।
ನಿನ್ನ ಒಡಲಿನಲ್ಲಿ ಹುಟ್ಟಿ ಸಾರ್ಥಕವಾಯಿತು ಭಾರತೀಯರ ಜನುಮ ॥

ಭಾರತೀಯರಾದ ನಾವೆಲ್ಲ ಸಾಮರಸ್ಯದಿ ಕೂಡಿ ಬಾಳೋಣ ಜೊತೆಗೂಡಿ ನಿಲ್ಲೋಣ ।
ಭಾರತದ ಭೂಮಿಗೆ ಮಕ್ಕಳ ಮನಸ್ಸಿನಲ್ಲಿ ದೇಶಾಭಿಮಾನವ ಬೆಳೆಸೋಣ ।
ರಾಷ್ಟ್ರೀಯ ಏಕತೆ, ಅಖಂಡತೆಗೆ ಸರ್ವಧರ್ಮ ಸಮಭಾವವ ಎತ್ತಿ ಹಿಡಿಯೋಣ ।
ಭಕ್ತಿ ಭಾವದಿ ಸತ್ಯ ಶಾಂತಿ ತೋರುತ ನಾವೆಲ್ಲ ಒಂದಾಗಿ ಕಾರ್ಯೋನ್ಮುಖರಾಗೋಣ ॥

ಬ್ರಿಟೀಷರ ಬಂಧನದಿ ಕಳಚಿ ಸ್ವರಾಜ್ಯವಾಗಲು ಶ್ರಮಿಸಿದವರ ಸ್ಮರಿಸೋಣ ।
ಭಾರತೀಯರೆಲ್ಲ ಸಮಭಾವದಿ ದೇಶವು ಉನ್ನತ ಸ್ಥಾನಕ್ಕೇರಲು ಒಂದಾಗಿ ಶ್ರಮಿಸೋಣ ।
ಸತ್ಯ, ಶಾಂತಿ, ಅಹಿಂಸೆಯ ತ್ರಿವೇಣಿಸಂಗಮವಾದ ಮಹಾತ್ಮ ಗಾಂಧೀಜಿಯ ನೆನೆಯೋಣ ।
ಗಾಂಧೀಜಿಯ ಪ್ರಾಮಾಣಿಕತೆ, ತ್ಯಾಗ, ಹೋರಾಟದ ಉದಾತ್ತ ಮೌಲ್ಯಕ್ಕೆ ಹೆಮ್ಮೆ ಪಡೆಯೋಣ ।


ದೇಶದ ಬಡತನ, ಹಸಿವು, ಅನಾರೋಗ್ಯ ಅಸಮಾನತೆ ಸಂಪೂರ್ಣವಾಗಿ ತೊಲಗಲಿ ।
ನಾಡಿನಲ್ಲಿ ನಿತ್ಯ ನಡೆವ ಕೋಮುಗಲಭೆ ನಿಂತು ಎಲ್ಲರು ಸ್ನೇಹದಿಂದ ಬಾಳಲಿ ।
ಭ್ರಷ್ಟತನವು ತೊಲಗಿ ದೇಶ ದೇಶಗಳ ನಡುವೆ ಪ್ರೀತಿ ಮೈತ್ರಿ ಬೆಸೆಯಲಿ ।
ದೇಶ ಭಕ್ತಿಯ ಬಿಸಿನೆತ್ತರು ಭಾರತೀಯರ ಧಮನಿ ಧಮನಿಯಲಿ ತುಂಬಿರಲಿ ॥

ಸ್ವಾತಂತ್ರ್ಯ ಪಡೆದು 75 ವರುಷದ ಅಮೃತೋತ್ಸವವ ಸಂಭ್ರಮದಿ ಆಚರಿಸೋಣ ।
ದೇಶಕ್ಕಾಗಿ ಹೋರಾಡಿ ಮಡಿದ ಸ್ವಾತಂತ್ರ್ಯಯೋಧರ ಭಕ್ತಿಯಿಂದ ಸ್ಮರಿಸೋಣ ।
ಪರಕೀಯತೆಯ ಮರೆತು ಭಾರತದ ಏಳಿಗೆಯ ಕುರಿತು ಒಗ್ಗಟ್ಟಿನಲ್ಲಿ ಬೆರೆಯೋಣ ।
ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲಾ ಹೋರಾಟಗಾರರಿಗೆ ಭಕ್ತಿಯ ನಮನ ಸಲ್ಲಿಸೋಣ ।
ಭಾರತಾಂಬೆಗೆ ನಮಿಸಿ ಜಯಕಾರ ಹಾಕುತ್ತಾ ತ್ರಿವರ್ಣ ಧ್ವಜವ ಹಾರಿಸೋಣ ॥

– ಶ್ರೀಮತಿ ಮಂಜುಳಾ ಮುರಳೀಧರ್ ರಾವ್, ಮಂಗಳೂರು


Muralidhara Rao Adyapadi
Proprietor

Mob : 94480 27259
99803 16434



**SPANDANA**
Constructions

IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3

CUSTOMER'S SATISFACTION IS OUR MOTTO



**PRAVEEN KUMAR ADYAPADY**
**NOTARY & ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

# ಅಪಾರ ಕೀರ್ತಿ ಗಳಿಸಿ



**ಡಾ। ಪವಿತ್ರ** ಪರಿದಂತ ತಜ್ಞರಾಗಿ MDS ಪದವಿ ಪಡೆದಿದ್ದು ತಮ್ಮ Batchನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಇವರು ಮಂಗಳೂರಿನ ಶ್ರೀ ಬಿ. ಎಸ್. ವಿನೋದ್ ರಾವ್ ಮತ್ತು ಶ್ರೀಮತಿ ಜಯಂತಿಯವರ ಸುಪುತ್ರಿ.

❖ ❖ ❖



**ಕು। ಪ್ರತೀಕ್ಷಾ ರಾವ್ ಬಿ.** ಇವರು ನಿಟ್ಟೆ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಪೂರೈಸಿ, ಈ ಬಾರಿಯ ಅಂತಿಮ ವರ್ಷದ ಬಯೋಟೆಕ್ನಾಲಜಿಯಲ್ಲಿ ಉತ್ತಮ ಫಲಿತಾಂಶವನ್ನು ದಾಖಲಿಸಿರುತ್ತಾರೆ. ಇವರು ಶ್ರೀ ಬಿ. ಜಯಪ್ರಕಾಶ ರಾವ್ ಮತ್ತು ಶ್ರೀಮತಿ ಗೀತಾ ರಾವ್ ಕಾವಳಕಟ್ಟೆ ಇವರ ಪುತ್ರಿ.

❖ ❖ ❖



**ಚಿ। ಎಚ್. ಆದಿತ್ಯ ರಾವ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ 90.1 (541/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಡಾ। ಹರಿಹರ ಪ್ರಸಾದ್ ಮತ್ತು ಶ್ರೀಮತಿ ಸೌಮ್ಯ ರಾವ್‌ರವರ ಸುಪುತ್ರ ಹಾಗೂ ಸುರತ್ಕಲ್‌ನ ಗೋವಿಂದದಾಸ ಕಾಲೇಜಿನ ವಿದ್ಯಾರ್ಥಿ.

❖ ❖ ❖



ಪೊಳಲಿ ಗಣೇಶ್ ರಾವ್ ಮತ್ತು ಬೃಂದಾ ದಂಪತಿಗಳ ಮಗಳು **ಕು। ಅಭೀಪ್ಸಾ** 2021–2022ನೇ ಸಾಲಿನ ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 568 ಅಂಕಗಳನ್ನು (94.66%) ಗಳಿಸಿರುತ್ತಾಳೆ. ಇವಳು ಕಟೀಲು S.D.P.T. PU ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



**ಚಿ। ಅನಿಕೇತ್** ಈ ಬಾರಿಯ ಪಿ.ಯು.ಸಿ. (CBSE) ಪರೀಕ್ಷೆಯಲ್ಲಿ ಶೇ. 93 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀ ಮುರಳೀಧರ್ ಜೋಶಿ ಮತ್ತು ಶ್ರೀಮತಿ ಚಂದ್ರಲೇಖರವರ ಸುಪುತ್ರ.

❖ ❖ ❖



ನಾರಾವಿ ರವಿಶಂಕರ ರಾವ್ ಮತ್ತು ಶ್ರೀಮತಿ ಪೂರ್ಣಿಮಾರವರ ಪುತ್ರ **ಚಿ। ಶ್ರೀವರ್ಧನ್** ದ್ವಿತೀಯ ಪಿ.ಯು.ಸಿ. ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ 586/600 (ಶೇ 97.6) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಕೊಡಿಯಾಲಬೈಲ್ ಎಕ್ಸ್‌ಪರ್ಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ.

❖ ❖ ❖



**ಕು। ನಿಧಿ ರಾವ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 96.3 (578/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಬಿ. ವಿ. ಜಯಚಂದ್ರ ಮತ್ತು ಶ್ರೀಮತಿ ಸ್ವಪ್ನಾರವರ ಸುಪುತ್ರಿ ಹಾಗೂ ಮಂಗಳೂರಿನ ಶಾರದಾ ವಿದ್ಯಾಲಯದ ವಿದ್ಯಾರ್ಥಿನಿ.

❖ ❖ ❖



**ಕು। ದೇವಯಾನಿ ಸಂತೋಷ್** ಈ ಬಾರಿಯ ಎಸ್.ಎಸ್.ಎಲ್.ಸಿ. (ICSE) ಪರೀಕ್ಷೆಯಲ್ಲಿ ಶೇ. 94 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಸಂತೋಷ್ ಅನಂತಪುರ ಮತ್ತು ಶ್ರೀಮತಿ ಸ್ವಪ್ನಾರವರ ಸುಪುತ್ರಿ, ಈಕೆ ದಿ ವ್ಯಾಲಿ ಸ್ಕೂಲ್, ಬೆಂಗಳೂರಿನ ವಿದ್ಯಾರ್ಥಿನಿ. ಈಕೆ ಹಿಂದೂಸ್ತಾನಿ ಗಾಯಕಿ ಮತ್ತು ಕಥಕ್ ನೃತ್ಯದಲ್ಲೂ ಪರಿಣಿತೆಯಾಗಿದ್ದಾಳೆ.



**ಕು। ಸನ್ನಿಧಿ** ಈ ಬಾರಿಯ SSLC (CBSE) ಪರೀಕ್ಷೆಯಲ್ಲಿ ಶೇ. 97.6 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ವಾಸುದೇವ ಮತ್ತು ಶ್ರೀಮತಿ ಸರಸ್ವತಿಯವರ ಸುಪುತ್ರಿ.

❖ ❖ ❖



**ಕು। ಲಾವಣ್ಯ** ಈ ಬಾರಿಯ SSLC (CBSE) ಪರೀಕ್ಷೆಯಲ್ಲಿ ಶೇ. 91.6 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಅಶ್ವಿನ್ ಮತ್ತು ಶ್ರೀಮತಿ ಪಲ್ಲವಿಯವರ ಸುಪುತ್ರಿ.

❖ ❖ ❖



**ಕು। ದೀಪ್ತ ರಾವ್** ಈ ಬಾರಿಯ SSLC (CBSE) ಪರೀಕ್ಷೆಯಲ್ಲಿ ಶೇ. 93.6 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ನಟರಾಜ್ ಮತ್ತು ಶ್ರೀಮತಿ ಅರ್ಪಣಾರವರ ಸುಪುತ್ರಿ.

❖ ❖ ❖



**ಚಿ। ಅಕ್ಷಿತ್ ರಾವ್** ಈ ಬಾರಿಯ SSLC (CBSE) ಪರೀಕ್ಷೆಯಲ್ಲಿ ಶೇ 93.4 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಕಾವು ಶ್ರೀ ಗಿರೀಶ್ ರಾವ್ ಮತ್ತು ಶ್ರೀಮತಿ ವೀಣಾರವರ ಸುಪುತ್ರ.

❖ ❖ ❖



**ಚಿ। ರಿತಂ** ಈ ಬಾರಿಯ SSLC (CBSE) ಪರೀಕ್ಷೆಯಲ್ಲಿ ಶೇ. 93.75 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀಮತಿ ಲೀಲಾ ರೋಹಿಣಿ ಮತ್ತು ಶ್ರೀ ಪ್ರಸನ್ನ ಉಪ್ಪುಂದರವರ ಸುಪುತ್ರ.

❖ ❖ ❖



**ಚಿ। ಧನುಷ್ ರಾವ್** ಈ ಬಾರಿಯ SSLC (CBSE) ಪರೀಕ್ಷೆಯಲ್ಲಿ ಶೇ. 93 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀ ರಾಘವೇಂದ್ರ ಮತ್ತು ಶ್ರೀಮತಿ ಪ್ರಿಯಾರವರ ಸುಪುತ್ರ.

❖ ❖ ❖



**ಕು। ಸರಸ್ವತಿ ರಾವ್** ಈ ಬಾರಿಯ SSLC (ICSE) ಪರೀಕ್ಷೆಯಲ್ಲಿ ಶೇ 98.5 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಬೆಂಗಳೂರಿನ ಮಾಂಟ್ರಾಡಿ ಶ್ರೀ ರಾಧಾಕೃಷ್ಣ ರಾವ್ ಮತ್ತು ಶ್ರೀಮತಿ ಶ್ರೀಕಲಾ ರಾವ್‌ರವರ ಸುಪುತ್ರಿ.

❖ ❖ ❖



**ಕು। ಬಿ. ಮನಸ್ವಿನಿ ರಾವ್** ಈ ಬಾರಿಯ SSLC (CBSE) ಪರೀಕ್ಷೆಯಲ್ಲಿ ಶೇ 93.4 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಬಿ. ಶಿವಪ್ರಸಾದ್ ರಾವ್ ಮತ್ತು ಶ್ರೀಮತಿ ವಿದ್ಯಾಶಾರದ ದಂಪತಿಗಳ ಪುತ್ರಿ ಹಾಗೂ ಮೂಡುಶೆಡ್ಡೆ ಶುಭೋದಯ ವಿದ್ಯಾಲಯದ ವಿದ್ಯಾರ್ಥಿನಿ.

❖ ❖ ❖



**ಕು। ನಿಹಾರಿಕ** ಈ ಬಾರಿಯ ಎಸ್.ಎಸ್.ಎಲ್.ಸಿ. (CBSE) ಪರೀಕ್ಷೆಯಲ್ಲಿ ಶೇ. 93.2 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಮಂಗಳೂರಿನ ಶ್ರೀ ಸುರೇಶ್ ಮತ್ತು ಶ್ರೀಮತಿ ನರ್ಮದಾರವರ ಸುಪುತ್ರಿ ಹಾಗೂ ಬೆಳಗಾವಿಯ ಅಮೃತಾ ವಿದ್ಯಾಲಯಂನ ವಿದ್ಯಾರ್ಥಿನಿ. ಇವಳು ಸಂಗೀತ ಕ್ಷೇತ್ರದಲ್ಲೂ ಸಾಧನೆ ಮಾಡಿ ಹಲವಾರು ಕನ್ನಡ ಚಾನೆಲ್‌ಗಳಲ್ಲಿ ತನ್ನ ಪ್ರತಿಭಾ ಪ್ರದರ್ಶನ ನೀಡಿದ್ದಾಳೆ.


**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**

ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**

Phone : 0824 - 2440110, 2213946

**VISHRAM MOTORS (P.) LTD.**

**No. 4, Kodialbail Church Building**

**K. S. Rao Road, MANGALORE - 575 003**

***Authorised Dealers for :***

**Vijai Super GP 150 &**

**Vikram 3 Wheelers (Petrol & Diesel)**



## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ. ಕೆ. ಸದಾಶಿವ ಶಾಸ್ತ್ರಿ, 3-68(7)**
**ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ - 575 019**

2021-22ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ತಾ. 09–10–2022ನೇ ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ತಾ. 20–09–2022ರ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**– ಕೆ. ಸದಾಶಿವ ಶಾಸ್ತ್ರಿ**

## ದೇವಸ್ಥಾನಕ್ಕೆ ದೇಣಿಗೆ




ನಿವೃತ್ತ ಶಿಕ್ಷಕಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ರಾವ್ ದಂಪತಿಗಳು ಮತ್ತು ಮಕ್ಕಳು ಚಿತ್ರಾಪುರ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಮಿತಿಗೆ ರೂ. 25,000/– ದೇಣಿಗೆಯನ್ನು ಸಮಿತಿ ಸದಸ್ಯರಾದ ಶ್ರೀ ಸಿ. ಚಂದ್ರಶೇಖರ್ ರಾವ್ ಇವರಲ್ಲಿ ನೀಡಿದರು.

## ಭವತೀ ಭಿಕ್ಷಾಂ ದೇಹಿ..



ಶ್ರೀಮತಿ ಸೌಮ್ಯ ಮತ್ತು ಶ್ರೀ ರಾಮ್‌ಪ್ರಸಾದ್‌ರವರ ಸುಪುತ್ರ **ಚಿ| ಅಭಿನವ** ಇವನ ಬ್ರಹ್ಮೋಪದೇಶವು ತಾರೀಕು 6–2–2022ನೇ ರವಿವಾರ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿತು.

## ಅಧ್ಯಕ್ಷರಾಗಿ ಆಯ್ಕೆ



ಕದ್ರಿ ನೃತ್ಯ ಕೇಂದ್ರದಲ್ಲಿ ಜರುಗಿದ ಕರ್ನಾಟಕ ಕರಾವಳಿ ನೃತ್ಯ ಕಲಾ ಪರಿಷತ್ (ರಿ.), ಮಂಗಳೂರು ಇದರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ **ವಿದ್ವಾನ್ ಯು. ಕೆ. ಪ್ರವೀಣ್** ಅವರು ನೂತನ ಅಧ್ಯಕ್ಷರಾಗಿ ಮುಂದಿನ ಮೂರು ವರ್ಷಗಳ ಅವಧಿಗೆ ಆಯ್ಕೆಗೊಂಡಿದ್ದಾರೆ.


ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ರೈಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

*Prop. : P. Srikanth Rao*
Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4




# ಮಂಗಳೂರಿನ ಶ್ರೀ ಶಾರದಾ ಭಜನಾ ಮಂಡಳಿಯ ಚತುರ್ಥ ವರ್ಷದ ಸಂಭ್ರಮ – ವಿದ್ಯಾನಿಧಿಗೆ ದೇಣಿಗೆ






ಚಿತ್ರ : ರಘುವೀರ್ ಹೆರ್ಡೂರ್

ಮಂಗಳೂರಿನ ಶ್ರೀ ಶಾರದಾ ಭಜನಾ ಮಂಡಳಿಯ 4ನೇ ವರ್ಷದ ಸವಿನೆನಪಿಗಾಗಿ ರೂ. 5,350/–ನ್ನು ಭಜನಾ ಮಂಡಳಿಯ ಗುರುಗಳಾದ ಶ್ರೀ ಸುಬ್ಬರಾವ್ ಪೊಳಲಿ ಇವರು ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆಯವರಿಗೆ ತಂಡದ ಪದಾಧಿಕಾರಿಗಳು ಮತ್ತು ಸದಸ್ಯರ ಸಮ್ಮುಖದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾನಿಧಿಗೆ ಕೊಡುಗೆಯಾಗಿ ತಾರೀಕು 13–6–2022ರಂದು ನೀಡಿದರು.

ವರದಿ : ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ✆ : 9739155359

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ 25ನೇ ವಾರ್ಷಿಕೋತ್ಸವ

ದಿನಾಂಕ 17–7–2022ನೇ ಭಾನುವಾರದಂದು 25ನೇ ವರ್ಷದ ಹೊಸ್ತಿಲಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ 25ನೇ ವಾರ್ಷಿಕೋತ್ಸವವು ಶ್ರೀ ಸುಬ್ರಹ್ಮಣ್ಯ ಸಭಾಭವನ, ಲಾಯಿಲದಲ್ಲಿ ನಡೆಯಿತು. ಸುಮಾರು 150 ಸದಸ್ಯರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ಮಕ್ಕಳಿಂದ ಪ್ರಾರಂಭಿಸಿ 60 ವರ್ಷ ದಾಟಿದ ವಯಸ್ಕರವರೆಗೆ ಎಲ್ಲರಿಗೂ ವಿವಿಧ ರೀತಿಯ ಒಳಾಂಗಣ ಕ್ರೀಡೆಗಳು, ರಜತಮಹೋತ್ಸವದ ಕ್ರೀಡಾ ಸಂಚಾಲಕರಾದ ಶ್ರೀ ದಿನೇಶ್ ಕುಮಾರ್‌ರವರ ಮುಂದಾಳತ್ವದಲ್ಲಿ ನಡೆದುವು.


ಸದಸ್ಯರೆಲ್ಲರೂ ಅತ್ಯುತ್ಸಾಹದಿಂದ ಭಾಗವಹಿಸಿ, ಸಂಭ್ರಮಿಸಿದರು. ಕ್ರೀಡಾಕೂಟವನ್ನು ಸಭಾದ ಉಪಾಧ್ಯಕ್ಷರಾದ ಶ್ರೀ ವಸಂತ್ ಭಟ್ ದಂಪತಿಗಳು ಉದ್ಘಾಟಿಸಿದರು.

ಮಧ್ಯಾಹ್ನದ ಭೋಜನಾನಂತರ ವಾರ್ಷಿಕೋತ್ಸವ ಹಾಗೂ ಮಹಾಸಭೆಯು ಸಭಾದ ಅಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಕಾರ್ಕಳ ಶ್ರೀ ಶಂಕರ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಕೇಶವ ರಾವ್ ಭಾಗವಹಿಸಿದ್ದರು. 2021–22ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಶಾಲು ಹೊದಿಸಿ ಸ್ಮರಣಿಕೆ ನೀಡಿ ಗೌರವಿಸಿದರು. ಉಜ್ವಲ ಭವಿಷ್ಯ ಹಾರೈಸಲಾಯಿತು.

ಬೆಳ್ತಂಗಡಿ ತಾಲೂಕಿನ 24 ವಿದ್ಯಾರ್ಥಿಗಳಿಗೆ ಒಟ್ಟು ರೂ. 2,50,000/– ವಿದ್ಯಾರ್ಥಿ ಪ್ರೋತ್ಸಾಹ ನಿಧಿಯನ್ನು ವಿತರಿಸಲಾಯಿತು.

ಮುಖ್ಯ ಅತಿಥಿಗಳು ಮಾತನಾಡಿ, ಬೆಳ್ತಂಗಡಿ ಸಂಘವು ಸಮಾಜದ ಸದಸ್ಯರ ಸಮಸ್ಯೆಗಳಿಗೆ ಸ್ಪಂದಿಸುವುದರೊಂದಿಗೆ, ಸಮಾಜದ ದೇವಸ್ಥಾನಗಳಿಗೆ ಕೂಡಾ ಸಹಕಾರ ನೀಡುತ್ತಿರುವುದು ಶ್ಲಾಘನೀಯ ಎಂದರು.

ಅಧ್ಯಕ್ಷರು ಮಾತನಾಡಿ ರಜತಮಹೋತ್ಸವದ ಈ ವರ್ಷದಲ್ಲಿ ತಿಂಗಳಿಗೊಂದು ಕಾರ್ಯಕ್ರಮ ಆಯೋಜಿಸುತ್ತಿದ್ದು, ವಿಪ್ರ ಭಜನಾ ಸಾಮ್ರಾಟ್, 6 ದೇವಸ್ಥಾನಗಳಿಗೆ



ತಲಾ 80 ಲೀಟರ್ ದೀಪದ ಎಣ್ಣೆ, ತಲಾ ಒಂದು ಕ್ವಿಂಟಾಲ್ ಅಕ್ಕಿ ವಿತರಣೆ, ತ್ರಿಕಾಲ ಪೂಜೆ, ಮೂರು ಮುತ್ತುಗಳು ಎಂಬ ಹಾಸ್ಯಮಯ ನಾಟಕ, ಡಿಜಿಟಲ್ ಪತ್ರಿಕೆ, ಸಭಾದ ಅಂಗಳಕ್ಕೆ ತಾಲೂಕಿನ ಮಾನ್ಯ ಶಾಸಕರ ಮೂಲಕ ಇಂಟರ್‌ಲಾಕ್ ಅಳವಡಿಕೆ, ಸಭಾಭವನದ ವಿಸ್ತರಣೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಈ ವರ್ಷ ಪೂರೈಸಲಾಗಿದೆ. ಇವೆಲ್ಲಾ ಕಾರ್ಯಕ್ರಮಗಳಿಗೆ ಸಹಕಾರ ನೀಡಿದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

ವೇದಿಕೆಯಲ್ಲಿ ಕಾರ್ಯದರ್ಶಿ ಶ್ರೀಮತಿ ರೇಖಾ, ಮಹಿಳಾ ಅಧ್ಯಕ್ಷೆ ಶ್ರೀಮತಿ ಹೇಮಲತಾ, ಯುವ ವೇದಿಕೆ ಅಧ್ಯಕ್ಷರಾದ ಶ್ರೀ ಪವನ್ ಕುಮಾರ್, ಮಹಿಳಾ ವೇದಿಕೆಯ ಗೌರವಾಧ್ಯಕ್ಷೆ ಶ್ರೀಮತಿ ಶಾಂತಾ ಸುರೇಶ್, ಆರ್ಥಿಕ ಸಮಿತಿ ಸಂಚಾಲಕರಾದ ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್, ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಶ್ರೀ ಬಿ. ಕೆ. ಧನಂಜಯ ರಾವ್, ಧಾರ್ಮಿಕ ಸಮಿತಿ ಸಂಚಾಲಕರಾದ ಶ್ರೀ ಎಂ. ಎಸ್. ಅರುಣ್ ಕುಮಾರ್, ಕ್ರೀಡಾ ಸಂಚಾಲಕರಾದ ಶ್ರೀ ದಿನೇಶ್ ಕುಮಾರ್ ದಿಶಾ ಇವರು ಉಪಸ್ಥಿತರಿದ್ದರು. ಶ್ರೀಮತಿ ನಿಶಾ, ಶ್ರೀಮತಿ ಶುಭಾ, ಶ್ರೀಮತಿ ರೂಪಾ ನಿರ್ವಹಿಸಿದ ಕಾರ್ಯಕ್ರಮದಲ್ಲಿ ಶ್ರೀ ಬಿ. ಕೆ. ಧನಂಜಯ ರಾವ್ ಸ್ವಾಗತಿಸಿದರು, ಶ್ರೀ ಪವನ್ ರಾವ್ ವಂದಿಸಿದರು.


ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶಕೃಪಾ, ಪೃಥ್ವೀ ಲೇಔಟ್
ಕೂಳೂರು, ಮಂಗಳೂರು - 575 013

Prop.: Kishore Kumar Kedige
Ph. : 2231524
M. : 9880726325

**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
Dealers in : 2 & 3 WHEELERS SPARES


**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028




# ಶ್ರೀ ಕ್ಷೇತ್ರ ಉದಯಾದ್ರಿ – ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನ

**ಪಡುಬಿದ್ರಿ, ಕಾಪು ತಾಲೂಕು, ಉಡುಪಿ ಜಿಲ್ಲೆ - 574 111**



## ಮನವಿ





ಪ್ರಿಯ ಭಗವದ್ಭಕ್ತರೇ,

ಶ್ರೀಮತ್ ಪರಮಹಂಸಪರವ್ರಾಜಕಾಚಾರ್ಯವರ್ಯೇತ್ಯಾದಿ ಅನೇಕ ಬಿರುದಾವಲೀ ಸಮಲಂಕೃತರಾದ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಮತ್ತು ತತ್ಕರಕಮಲಸಂಜಾತ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರ ಪರಮಾನುಗ್ರಹಪುರಸ್ಸರ ಆಶೀರ್ವಾದಗಳೊಂದಿಗೆ ಇದೇ ಚೈತ್ರಕೃಷ್ಣ ಪಾಡ್ಯದ ಶುಭದಿನ (17-04-2022ನೇ ರವಿವಾರ) ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಪವಿತ್ರ ಹಸ್ತಗಳಿಂದ ಶ್ರೀ ಬಾಲಗಣಪತಿ ದೇವರ ಬ್ರಹ್ಮಕುಂಭಾಭಿಷೇಕ ಹಾಗೂ ಪುಷ್ಪರಥ ಸಮರ್ಪಣಾ ಮಹೋತ್ಸವಗಳು ವಿಜೃಂಭಣೆಯಿಂದ ಸಂಪನ್ನಗೊಂಡಿರುವುದು ತಮಗೆಲ್ಲ ವೇದ್ಯವಾದ ವಿಚಾರ. ಶ್ರೀ ಜಗದ್ಗುರುಗಳ ಅನುಗ್ರಹ ಸಂದೇಶವನ್ನು ಕರುಣಿಸುವ ಸಮಯದಲ್ಲಿ ಈ ಕ್ಷೇತ್ರದಲ್ಲಿ ಶ್ರೀ ಶಂಕರ ಭಗವತ್ಪಾದಾಚಾರ್ಯರ ಪ್ರತಿಮೆಯನ್ನು ಸ್ಥಾಪಿಸಿ ಯಥಾಯೋಗ್ಯವಾಗಿ ಆರಾಧನೆ ನಡೆಸುತ್ತಾ ಶ್ರೀ ಶಂಕರ ಜಯಂತಿ, ಸಾಪ್ತಾಹಿಕ ಭಜನೆ ಮುಂತಾದ ಆಚರಣೆಗಳನ್ನು ನಡೆಸುವಂತೆ ಆದೇಶಿಸಿರುತ್ತಾರೆ. ಆ ಪ್ರಕಾರ ಬ್ರಹ್ಮಕಲಶೋತ್ಸವ ಸಮಿತಿಯ ಹಾಗೂ ಆಡಳಿತ ಸಮಿತಿಯ ಸದಸ್ಯರು, ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ತಾರೀಕು 22-04-2022ನೇ ಶುಕ್ರವಾರದಂದು ಶೃಂಗೇರಿಗೆ ತೆರಳಿ ಶ್ರೀ ಜಗದ್ಗುರುಗಳನ್ನು ಸಂದರ್ಶಿಸಿ, ಈ ವಿಚಾರದಲ್ಲಿ ಶ್ರೀ ಶ್ರೀಗಳವರ ಮಾರ್ಗದರ್ಶನವನ್ನು ಬೇಡಿದರು.

ಈ ಸಂದರ್ಭದಲ್ಲಿ ಶ್ರೀ ಜಗದ್ಗುರುಗಳು ಆದೇಶಿಸಿದಂತೆ ಶ್ರೀ ಶಂಕರ ಭಗವತ್ಪಾದಕರ ಅಮೃತಶಿಲಾಮೂರ್ತಿಯನ್ನು ಶ್ರೀ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸುವುದೆಂದು ತೀರ್ಮಾನಿಸಲಾಯಿತು. ಶ್ರೀ ಮಠದಿಂದಲೇ ಆಚಾರ್ಯ ಶ್ರೀ ಶಂಕರರ ಮೂರ್ತಿಯನ್ನು ಒದಗಿಸಲಾಗುವುದೆಂದು ಶ್ರೀ ಗುರುಗಳಿಂದ ಅಪ್ಪಣೆಯಾಯಿತು. ವಿಗ್ರಹವೆಚ್ಚ ಹಾಗೂ ಅದರ ಸ್ಥಾಪನೆಯ ಖರ್ಚುಗಳಿಗೆ ಸುಮಾರು ಎರಡೂವರೆ ಲಕ್ಷ ರೂಪಾಯಿಗಳ ಆವಶ್ಯಕತೆಯನ್ನು ಅಂದಾಜಿಸಲಾಗಿದೆ. ಶ್ರೀ ಕ್ಷೇತ್ರದ ತಂತ್ರಿಗಳು ಸೂಚಿಸಿದಂತೆ ಆದಷ್ಟು ಹೆಚ್ಚು ಭಕ್ತರು ಶ್ರೀ ಗುರುಸೇವೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಲು ನಿರ್ಧರಿಸಲಾಯಿತು. ಆದ್ದರಿಂದ ಶ್ರೀ ಗುರುಭಕ್ತರು ತಲಾ ರೂಪ್ಯಾ 1000/-ದ ಕೂಪನ್ ಪಡೆದುಕೊಂಡು ಶ್ರೀ ಗುರುಗಳ ಆಜ್ಞೆಯು ಸಾಕಾರಗೊಳ್ಳುವಲ್ಲಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ.

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**

ಬ್ರಹ್ಮಕಲಶೋತ್ಸವ ಸಮಿತಿ ಆಡಳಿತ ಸಮಿತಿ

ರೂಪ್ಯಾ 1000/- ಕೂಪನ್‌ನ್ನು ಪಡೆದುಕೊಳ್ಳಲು ಈ ಕೆಳಗಿನವರನ್ನು ಸಂಪರ್ಕಿಸಿರಿ :

**ಜಗದಾಭಿರಾಮಸ್ವಾಮಿ** ✆ : 9448626220 **ಶ್ರೀನಿವಾಸ ಶರ್ಮ** ✆ : 9945933363 **ಪಿ. ಡಿ. ಶೇಖರ್ ರಾವ್** ✆ : 9686942489

ಹಣ ಕಳುಹಿಸಬಿಚ್ಚಿಸುವ ಭಕ್ತಾದಿಗಳು ಈ ಕೆಳಗಿನ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಾಗಿ ವಿನಂತಿ.

**ಕರ್ನಾಟಕ ಬ್ಯಾಂಕ್, ಪಡುಬಿದ್ರಿ ಶಾಖೆ • S.B. A/c No.: 6102500100134701 • IFSC Code : KARB0000610**

# ಗುರುದೇವತಾ ಭಜನಾ ಅಭಿಯಾನ



ಶ್ರೀ ಸುಬ್ರಹ್ಮಣ್ಯ ಸಭಾ ಶಾಂಕರತತ್ವ ಅಭಿಯಾನ ಮತ್ತು ಅನೇಕ ಭಜನಾ ತಂಡಗಳ ಸಹಕಾರದಿಂದ ಮತ್ತು ಜಗದ್ಗುರುಗಳ ಆದೇಶ ಮತ್ತು ಆಶೀರ್ವಾದದಿಂದ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಿನ ಪೂರ್ತಿ ಭಜನಾ ಕಾರ್ಯಕ್ರಮ ನಡೆಯಿತು. ಬೆಳಗ್ಗೆ 7-30ಕ್ಕೆ ಗುರುಸಪರ್ಯಾ, ವಿವಿಧ ಪಾರಾಯಣ, ಉಪನ್ಯಾಸದ ಬಳಿಕ 9-00 ಗಂಟೆಗೆ ಶಾಂಕರತತ್ವ ಅಭಿಯಾನದ ರಾಜ್ಯ ಸಂಚಾಲಕರಾದ ಶ್ರೀ ಶಿಕಾರಿಪುರ ಕೃಷ್ಣಮೂರ್ತಿ, ವಿದ್ವಾಂಸರಾದ ಶ್ರೀ ದಿವಾನ ಕೇಶವ ಭಟ್, ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ದೀಪ ಪ್ರಜ್ವಲನೆ ನಡೆಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಸುಮಾರು 10ಕ್ಕೂ ಅಧಿಕ ತಂಡಗಳು ಗುರುದೇವತಾ ಭಜನಾ ಮಂಜರಿಯ ಭಜನೆಗಳನ್ನು ಅದೇ ರಾಗದಲ್ಲಿ ಸರತಿಯಂತೆ ಏಳು ಗಂಟೆಗಳ ಕಾಲ ನಿರಂತರವಾಗಿ ಹಾಡಿ ಗುರುಗಳನ್ನು ಮತ್ತು ದೇವರನ್ನು ಭಕ್ತಿಯಿಂದ ಸ್ತುತಿಸಿದರು. ಸುಮಾರು 250ಕ್ಕೂ ಹೆಚ್ಚು ಶ್ರೀ ಶಂಕರ ಭಕ್ತರು ಪಾಲ್ಗೊಂಡಿದ್ದರು. ಇದರಿಂದ ಪ್ರೇರಿತರಾಗಿ ಇನ್ನಷ್ಟು ತಂಡಗಳು ನಮ್ಮನ್ನು ಮುಂದಿನ ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳಲು ವಿನಂತಿಸಿ ಪುಣ್ಯಕಾರ್ಯದಲ್ಲಿ ಭಾಗವಹಿಸುವ ಇಚ್ಛೆ ವ್ಯಕ್ತಪಡಿಸಿದರು. ಅಭಿಯಾನದ ಸಂಚಾಲಕರುಗಳಾದ ಶ್ರೀ ಶ್ರೀಧರ್ ಶಾಸ್ತ್ರೀ, ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀಮತಿ ಸುಜಾತ ಕಾರಂತ್, ಶ್ರೀ ಸುಬ್ರಹ್ಮಣ್ಯ ಸಭಾದ ಮಹಿಳಾ ವೇದಿಕೆಯ ಪದಾಧಿಕಾರಿಗಳಾದ ಶ್ರೀಮತಿ ಕುಸುಮಾ ಎನ್., ಶ್ರೀಮತಿ ಪುಷ್ಪಾವತಿ ಎಸ್., ಶ್ರೀಮತಿ ಸ್ನೇಹಲತಾ ಡಿ., ಶ್ರೀಮತಿ ಭುವನಾ ಎನ್. ವ್ಯವಸ್ಥೆಗಳಲ್ಲಿ ಸಹಕರಿಸಿದರು. ಅಭಿಯಾನದ ನಗರ ಸಂಚಾಲಕರಾದ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಸಹಕರಿಸಿದ ಸರ್ವರಿಗೂ ವಂದನೆಗಳು.

The RIGHT Place for the Customer
RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

PREETHIKA AUTOMOBILES
✆ 2493633 9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

# ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಪ್ರಕಟಣೆಗಳು**

ಕುದ್ಮಿ ಪದ್ಮನಾಭಯ್ಯ ಗಾರ್ಡನ್ಸ್, ಮಂಗಳೂರು, ದಕ್ಷಿಣ ಕನ್ನಡ, ಕರ್ನಾಟಕ - 575 003

## ಶ್ರೀ ಕರುಣ್ ರಾವ್ ಬೆಳ್ಳೆ, ಕಾರ್ಯದರ್ಶಿ

**1** 2022-2023ನೇ ಸಾಲಿನಲ್ಲಿ ಪಿ.ಯು.ಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದುಳಿದವರ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿ ವೇತನವನ್ನು ಪಡೆಯಲು ದಿನಾಂಕ 30-11-2022ರ ಒಳಗೆ ತಲುಪುವಂತೆ ಅರ್ಜಿಯನ್ನು ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಲು ಕೋರಲಾಗಿದೆ. ಅರ್ಜಿಯೊಂದಿಗೆ ಕಳೆದ ಸಾಲಿನ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

**ಅರ್ಜಿಗಳು ದೊರೆಯುವ ವಿಳಾಸಗಳು :**

1) ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ಪದವಿನಂಗಡಿ, ಪುತ್ತೂರು, ಬೆಳ್ತಂಗಡಿ, ಸುರತ್ಕಲ್, ಸುಳ್ಯ, ಬಿ.ಸಿ. ರೋಡ್, ಕಾರ್ಕಳ, ಮೂಡಬಿದ್ರೆ ಹಾಗೂ ವಿಟ್ಲ ಶಾಖೆಗಳು
2) ಶ್ರೀ ಕೆ. ಹರ್ಷಕುಮಾರ್, ಪ್ರಮೋದ್ ಆಟೋಮೊಬೈಲ್ ಕರಂಗಲ್ಪಾಡಿ, ಮಂಗಳೂರು
3) ಶ್ರೀ ಬಿ.ಎಸ್. ಅನಿಲ್ ರಾವ್, ವಿಶ್ರಾಮ್ ಮೋಟಾರ್ಸ್ ಕೊಡಿಯಾಲ್‌ಬೈಲ್, ಮಂಗಳೂರು
4) ಶ್ರೀ ಉಮೇಶ್ ಶಾನ್‌ಭಾಗ್, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ
5) ಸುಲಗ್ನ ಮಾಸಪತ್ರಿಕೆ, ಕುಕ್ಕಿಕಟ್ಟೆ, ಉಡುಪಿ
6) ಶ್ರೀ ಶಾರದಾಮಂಟಪ ಕುಂಜಿಬೆಟ್ಟು, ಉಡುಪಿ
7) ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ
8) ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ ಕೊಕ್ರಾಡಿ, ಬೆಳ್ತಂಗಡಿ ತಾಲೂಕು
9) ಶ್ರೀ ಎಮ್. ಎಸ್. ಅರುಣ ಕುಮಾರ್, ದಿಶಾ ಬೇಕರಿ, ಉಜಿರೆ
10) ಶ್ರೀ ದೇವಾನಂದ ಭಟ್, ಅಧ್ಯಕ್ಷರು ಆದಿಶಂಕರ ಬ್ರಾಹ್ಮಣ ಸಭಾ, ಮೂಡಬಿದ್ರೆ
11) ಶ್ರೀ ಕೇಶವ ರಾವ್, ಅಧ್ಯಕ್ಷರು, ಶಂಕರ ಪ್ರತಿಷ್ಠಾನ ಕಾರ್ಕಳ ಚತುರ್ಮುಖ ಬಸದಿ ಹತ್ತಿರ, ಕಾರ್ಕಳ
12) ಶ್ರೀ ಹರಿಶ್ಚಂದ್ರ ರಾವ್, ಕಾರ್ಯದರ್ಶಿ, ಶಂಕರ ಪ್ರತಿಷ್ಠಾನ ಕಾರ್ಕಳ
13) ಶ್ರೀ ಎಮ್. ಕೆ. ಮೋಹನ್ ರಾವ್, ಅಧ್ಯಕ್ಷರು ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ
14) ಶ್ರೀ ಎನ್. ಕೆ. ಜಗನ್ನಿವಾಸ ರಾವ್, ವಕೀಲರು, ಪುತ್ತೂರು
15) ಶ್ರೀ ಎಂ. ಎಸ್. ರಘುನಾಥ ರಾವ್, ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು
16) ಶ್ರೀ ಎನ್. ಎಸ್. ನಟರಾಜ್, ಪುತ್ತೂರು
17) ಡಾ। ಸದಾಶಿವ ರಾವ್, ಜ್ಯೋತಿ ಆಸ್ಪತ್ರೆ, ಸುಳ್ಯ
18) ಶ್ರೀ ಬಿ. ಭಾಸ್ಕರ್ ರಾವ್, ಬಯಂಬು, ಸುಳ್ಯ
19) ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರೀ ದೇವಸ್ಥಾನ, ಬಳ್ಪ, ಸುಳ್ಯ ತಾಲೂಕು

**2** ಶ್ರೀ ಕೂಡ್ಲು ವಿಷ್ಣು ಶಾನ್‌ಭಾಗರು ತಮ್ಮ ಪತ್ನಿ ಶ್ರೀಮತಿ ಕೂಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ. 1,05,000/- ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹ ಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕೂಡ್ಲು ಕೇಶವ ಶಾನುಭಾಗರ ಸ್ಮಾರಕ ನಿಧಿಯನ್ನು ರೂ. 1,00,000/- ವಂತಿಗೆಯೊಂದಿಗೆ ಸ್ಥಾಪಿಸಿ ಸಿ.ಎ. ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹ ಧನವನ್ನು ಕೊಡಲು ಬಯಸಿದ್ದಾರೆ.

2022-2023ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯಲ್ಲಿ ನಡೆಯುವ ಸ್ಕೋಲರ್ಸ್ ಡೇ ಸಂದರ್ಭದಲ್ಲಿ ವಿತರಿಸಲಾಗುವುದು. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹ ಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30-11-2022ರ ಒಳಗೆ ತಲುಪುವಂತೆ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಲು ಕೋರಲಾಗಿದೆ. ಅರ್ಜಿಯೊಂದಿಗೆ ಕಳೆದ ಸಾಲಿನ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

**3** 2022-2023ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದುಳಿದವರ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಮ್.ಇ., ಎಮ್.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಮ್.ಎ., ಎಮ್.ಎಸ್.ಸಿ., ಎಮ್.ಕಾಂ., ಸಿ.ಎ., ಬಿ.ಎಡ್., ಡಿ.ಎಡ್.,) ಪಡೆಯಲು ಸಾಲ ವಿದ್ಯಾರ್ಥಿ ವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಕಳೆದ ಸಾಲಿನ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2022-2023ನೇ ಸಾಲಿನ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ಇವರನ್ನು ಸಂಪರ್ಕಿಸಲು ಕೋರಲಾಗಿದೆ.


**4** ಶ್ರೀಮತಿ ಶ್ಯಾಮಲ ಎಸ್. ರಾವ್ ತಮ್ಮ ಪತಿ ಶ್ರೀ ಎ. ಸೂರ್ಯಪ್ರಕಾಶ್ ರಾವ್ ಇವರ ಸ್ಮರಣಾರ್ಥ ನಮ್ಮ ಸಮಾಜದ ಬಡ ಕುಟುಂಬದಿಂದ ಬರುವ ಎಸ್.ಎಸ್.ಎಲ್.ಸಿ. ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗೆ ಪ್ರೋತ್ಸಾಹ ಧನವನ್ನು ಕೊಡಲು ಬಯಸಿದ್ದಾರೆ.

2022-2023ನೇ ಸಾಲಿನ ಮೇಲಿನ ಪ್ರೋತ್ಸಾಹಧನವನ್ನು ಶ್ರೀ ಸಭೆಯಲ್ಲಿ ನಡೆಯುವ ಸ್ಕೋಲರ್ಸ್ ಡೇ ಸಂದರ್ಭದಲ್ಲಿ ವಿತರಿಸಲಾಗುವುದು. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30-11-2022ರ ಒಳಗೆ ತಲುಪುವಂತೆ ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇವರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ.ಯ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.


## 'ಆಟಿತೋ ಆಟ ಕೂಟ' ಸ್ಪರ್ಧಾ ವಿಜೇತರು

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಇಲ್ಲಿ ತಾರೀಕು 24-07-2022ರಂದು ನಡೆದ



**"ಆಟಿತೋ ಆಟ ಕೂಟ"**



ಕಾರ್ಯಕ್ರಮದ ಸ್ಪರ್ಧಾ ವಿಜೇತರು

**ಹಳ್ಳಿ ಉಡುಗೆ ಸ್ಪರ್ಧೆ**

ಮಹಿಳಾ ವಿಭಾಗ :

I : ಶ್ರೀಮತಿ ಕನಕವಲ್ಲಿ ಹರ್ಷಕುಮಾರ್

II : ಶ್ರೀಮತಿ ದೀಪಾ ಪ್ರಶಾಂತ್

ಪುರುಷರ ವಿಭಾಗ :

I : ಶ್ರೀ ಜಗನ್ನಾಥ್ ರಾವ್

II : ಶ್ರೀ ಶ್ರೀಧರ್ ರಾವ್

ಮಕ್ಕಳ ವಿಭಾಗ : I : ಅಭಿನವ್; II : ಆಕಾಂಕ್ಷ; III : ಜನ್ವಿತ್

**ಕಲ್ಲಾಟ**

I : ಶ್ರೀಮತಿ ವೀಣಾ; II : ಶ್ರೀಮತಿ ಶುಭಲಕ್ಷ್ಮಿ; III : ಶ್ರೀ ಸಂತೋಷ್ ಯು.

**ಚೆನ್ನೆಮಣೆ**

I : ಶ್ರೀಮತಿ ಕನಕವಲ್ಲಿ ಹರ್ಷಕುಮಾರ್; II : ಸೌಮ್ಯಾ III : ಪ್ರಾರ್ಥನಾ

**ಕೇರಂ**

ಹಿರಿಯರ ವಿಭಾಗ : I : ಪಲ್ಲವಿ ಮತ್ತು ಶ್ರುತಿ; II : ಜಯಚಂದ್ರ ಮತ್ತು ಮನೀಷ್

ಕಿರಿಯರ ವಿಭಾಗ : I : ಅಶಿಶ್ ಮತ್ತು ಆಕಾಂಕ್ಷ; II : ಅಭಿನವ್ ಮತ್ತು ಗೌರೀಶ್

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



**ಮಾರ್ಪಳ್ಳಿ ಶ್ರೀನಿವಾಸ ರಾವ್** (72) ತಾರೀಕು 9-7-2022ನೇ ಶನಿವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

* * *



ದಿ। ಕಲ್ಮೆ ವಿಠಲ್ ರಾವ್‌ರವರ ಪತ್ನಿ **ಶ್ರೀಮತಿ ಸುಮತಿ** (82) ತಾರೀಕು 20-7-2022ನೇ ಬುಧವಾರ ನಿಧನ ಹೊಂದಿದರು. ಇವರು ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

* * *



ದಿ। ಕುಂಭಾಟ್ ರಮೇಶ್ ರಾವ್‌ರವರ ಪತ್ನಿ **ಶ್ರೀಮತಿ ಕೆ. ಶಾಂಭವಿ ರಾವ್** (77) ತಾರೀಕು 24-7-2022ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ನಾಲ್ವರು ಪುತ್ರರು ಮತ್ತು ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

* * *



ನಂದಿಕೂರು ಗ್ರಾಮದ **ಶ್ರೀಮತಿ ಎಸ್. ಸರೋಜಿನಿ ದೇವ ರಾವ್** (81) ಅವರು ಅಸೌಖ್ಯದಿಂದ ಸ್ವಗೃಹದಲ್ಲಿ ಜುಲೈ 16ರಂದು ನಿಧನ ಹೊಂದಿದರು. ಇವರು ಕರಾವಳಿ ಕರ್ನಾಟಕದ ಪ್ರಸಿದ್ಧ ಅಗರಬತ್ತಿ ವಿತರಕರಾದ ದೇವಿಕೃಪಾ ಏಜೆನ್ಸಿಯ ದಿ। ಸಾಂತೂರು ದೇವರಾವ್ ನಂದಿಕೂರು ಇವರ ಧರ್ಮಪತ್ನಿಯಾಗಿದ್ದಾರೆ. ಮೃತರು ಮೂವರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

# ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಆಟಿತೋ ಆಟ ಕೂಟ'










ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾರೀಕು 23-07-2022ನೇ ಶನಿವಾರದಂದು 'ಆಟಿತೋ ಆಟ ಕೂಟ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಇತರ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಸಂತ ಅಲೋಶಿಯಸ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಶ್ರೀ ಕೆ. ಆರ್. ಉಪಾಧ್ಯಾಯರು ಚೆನ್ನೆಮಣೆ, ಕಲ್ಲಾಟ, ಕೇರಂ ಪಂದ್ಯಾಟವನ್ನು ಉದ್ಘಾಟಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಹಿಳಾ ವೇದಿಕೆಯ ವತಿಯಿಂದ 'ಹಳ್ಳಿ ಉಡುಗೆ' ಸ್ಪರ್ಧೆ ವಿವಿಧ ವಿಭಾಗಗಳಲ್ಲಿ ನಡೆಯಿತು. ಆಟಿಯ ವಿಶೇಷ ಖಾದ್ಯಗಳನ್ನು ಒಳಗೊಂಡ ಭೋಜನದ ಬಳಿಕ ಪ್ರಗತಿಪರ ಕೃಷಿಕ ಶ್ರೀ ಇನ್ನ ಚಂದ್ರಕಾಂತ್ ರಾವ್‌ರವರು 'ಪರ್ಯಾಯ ಬೆಳೆ ಹಣ್ಣು-ಹಂಪಲುಗಳ ಕೃಷಿ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಸಮಾಜದ ಪ್ರತಿಭೆಗಳಿಂದ 'ಕರೋಕೆ ರಸಮಂಜರಿ' ಜರುಗಿತು. 22 ಜನ ಗಾಯಕರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಬಹುಮಾನವನ್ನು ಶ್ರೀ ಸುಬ್ರಹ್ಮಣ್ಯ ಚಾರಿಟೇಬಲ್ ಟ್ರಸ್ಟ್ ನಿರ್ದೇಶಕಿ ಡಾ। ಜಯಲಕ್ಷ್ಮಿ ಪ್ರಾಯೋಜಿಸಿದರು. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪಿ., ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ಎನ್., ಮಹಿಳಾ ವೇದಿಕೆ ಗೌರವ ಅಧ್ಯಕ್ಷೆ ಶ್ರೀಮತಿ ಕನಕವಲ್ಲಿ ಎಚ್., ಅಧ್ಯಕ್ಷೆ ಶ್ರೀಮತಿ ಕುಸುಮಾ ಎನ್., ಶ್ರೀಮತಿ ಪುಷ್ಪಾವತಿ ಎಸ್., ಶ್ರೀಮತಿ ಭುವನಾ ಎನ್., ಶ್ರೀಮತಿ ಸ್ನೇಹಲತಾ ಡಿ. ಸ್ಪರ್ಧೆಗಳನ್ನು ಆಯೋಜಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಯುವವೇದಿಕೆ ಕಾರ್ಯದರ್ಶಿ ಶ್ರೀ ಸುರೇಶ್ ಕೆ. ಧನ್ಯವಾದ ನೀಡಿದರು.

ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರ್







Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* *Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*

*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*